MR. SPEAKER: So, I just wanted something to review myself, I thought you are.....

ಪ್ರವಾಸಿ ಕೇಂದ್ರಗಳ ಅಭಿವೃದ್ಧಿ.

129 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ್ ಫಾಲ್ಸ ಮತ್ತು ಧುಪದರ್ಮ ಕೇಂದ್ರಗಳನ್ನು ಪ್ರಾವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಪರಿಶೀಲಿಸುವರೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರವಾಸೋದ್ಯಮ ನೀತಿಯಲ್ಲಿ ಗೋಕಾಕ್ ಫಾಲ್ಸನ್ನು 'ಸಿ' ಅಭಿವೃದ್ಧಿಗೆ ಖಾಸಗಿಯಾದ ಸ್ಥಳವೆಂದು ವಿಶೇಷವಾಗಿ ಗುರುತಿಸಲಾಗಿದೆ ಮತ್ತು ಧೂಪದಾಳವನ್ನು 'ಬಿ' ಗುಂಪಿನಲ್ಲಿ ಸೇರಿಸಲಾಗಿದೆ.

ಶ್ರೀ ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಗೋಕಾಕ್ ತಾಲ್ಲೂಕನ್ನು 'ಸಿ' ಗುಂಪಿನಲ್ಲಿ ಸೇರಿಸಲಾಗಿದೆ. ತುಪ್ಪದಾಳನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಎಷ್ಟೋ ದಿವಸದಿಂದ ಸಾವಿರಾರು ಪ್ರವಾಸಿಗರು ಅಲ್ಲಿ ಬಂದು ಹೋಗುತ್ತಾರೆ. ಅದನ್ನು ಸಹ 'ಬಿ' ಗುಂಪಿಗೆ ತೆಗೆದುಕೊಂಡು ತಾತ್ಕಾರ್ಲಿಕವಾಗಿ ಅಲ್ಲಿ ಪ್ರವಾಸಿಗರಿಗೆ ಇಳಿದುಕೊಳ್ಳಲು ಅಥವಾ ಕ್ಯಾಂಟಿನ್ ವ್ಯವಸ್ಥೆ ಏನೂ ಇಲ್ಲ. ಆದಕಾರಣ ಯೋಜನೇ ಜಾರಿ ಆಗುವವರೆಗೆ ಅಲ್ಲಿ ತಾತ್ಕಾರ್ಲಿಕವಾಗಿ 'ಏನಾದರೂ ವ್ಯವಸ್ಥೆ ಮಾಡುತ್ತೀರೇ ಎಂದು ಕೇಳಬಯಸುತ್ತೇನೆ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಗೋಕಾಕ್ ಫಾಲ್ಸನ್ನು ನಮ್ಮ ಪ್ರವಾಸೋದ್ಯಮ ನೀತಿಯಲ್ಲಿ ಎ.ಬಿ.ಸಿ ಎಂದು ಮೂರು ಕೆಟಗರಿಯನ್ನು ಮಾಡಿದ್ದೇವೆ. ಇದನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಅಂದರೆ ಖಾಸಗಿಯವರು ಇಲ್ಲಿ ಏನಾದರೂ ಬಂಡವಾಳ ತೊಡಗಿಸಿ ಅಲ್ಲಿ ವಾಸೋದ್ಯಮಕ್ಕೆ ಅನುಕೂಲವಾಗತಕ್ಕಂಥ ಹೋಟೆಲ್ ಕಟ್ಟಿಸುವುದು ಅಥವಾ ಪ್ರವಾಸೋದ್ಯಮಕ್ಕೆ ಬೇಕಾಗುವಂಥ ಸಲಕರಣೆಗಳಾಗಲಿ ಒದಗಿಸುವುದಾದರೆ ಅವರಿಗೆ ಕನ್ಸೇಶನ್ ಕೊಡುತ್ತೇವೆ. ಟ್ಯಾಕ್ಸ ಕನ್ಸೇಶನ್ ಕೊಡುತ್ತೇವೆ, ಅವರಿಗೆ ಶೇಕಡಾ 15ರಷ್ಟು ಎಲೆಕ್ಟ್ರಿಸಿಟಿ ರಿಯಾಯಿತಿಯನ್ನು ಕೊಡುತ್ತೇವೆ, ಆ ರೀತಿಯ ಗೋಕಾಕ್ ಫಾಲ್ಸ್‌ನಲ್ಲಿ ಬಂಡವಾಳ ತೊಡಗಿಸಲು ಇನ್ನು ಯಾರೂ ಬಂದಿಲ್ಲ. ಆದರೆ ಸರ್ಕಾರದವರೇ, ಗೋಕಾಕ್ ಫಾಲ್ಸನ್ನು ನಮ್ಮ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಎಂದು ಗುರುತು ಮಾಡಿದ್ದೇವೆ ಅಲ್ಲಿ ಕೆಲವೊಂದು ಇನ್ವೆಸ್ಟ್‌ಮೆಂಟ್ ಆಗಬೇಕಾಗಿದೆ. ಈ ವರ್ಷ ಪ್ರಾರಂಭ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೇ, ಆಗುಂಬೆಯಲ್ಲಿ ಸುಮಾರು 5-6 ವರ್ಷಗಳಿಂದ ಒಂದು ಪ್ರವಾಸೋದ್ಯಮ ಕಟ್ಟಡವನ್ನು ಕಟ್ಟಿಸುತ್ತಿದ್ದಾರೆ. ಅದಕ್ಕೆ 25 ಲಕ್ಷರೂಪಾಯಿ ಇನ್ವೆಸ್ಟಮೆಂಟ್ ಮಾಡಿದ್ದಾರೆ. ಅದನ್ನು ಯಾರಿಗೂ ಪಹಿಸಲೂ ಇಲ್ಲ, ಆ ಬಿಲ್ಡಿಂಗ್ ಕಾಮಗಾರಿ ಕಂಪ್ಲೀಟ್ ಆಗಲೂ

ಇಲ್ಲ. ಆಗೊಂಬೆಯಂಥ ಪ್ರವಾಸಿಧಾಮಕ್ಕೆ ಏನೂ ಕೂಡ ಮಾಡಲಿಲ್ಲ. ನಿಮ್ಮ ಪ್ರವಾಸೋದ್ಯಮ ಇಲಾಖೆ ನಿದ್ರೆಯಲ್ಲಿದೆ. ಅದಕ್ಕಾಗಿ ದಯವಿಟ್ಟು ಸ್ವಲ್ಪ ಎಚ್ಚರಿಸುತ್ತೀರೇ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ನಿಜ. ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ಅಲ್ಲಿ ಪ್ರವಾಸಿ ಮಂದಿರಗಳಾಗಲೀ, ಹೋಟೆಲ್ ಅಕಾಮೆಡೇಶನ್ ಆಗಲೀ ಸರಿಯಾಗಿ ಮೆಂಟೇನ್ ಮಾಡಿಲ್ಲ. ಆದರೆ ಈ ವರ್ಷದಿಂದ ಎಲ್ಲಾ ಟೂರಿಸಂ ಡಿಪಾರ್ಟಮೆಂಟ್ ಸಂಬಂಧಪಟ್ಟಂಥ ರಿಸಾರ್ಟ್ಸ್ ಇರಲ್ಲಿ, ಗೆಸ್ಟಹೌಸಸ್ ಇರಲಿ ಅವನ್ನೆಲ್ಲಾ ರಿಜುವನೇಟ್ ಮಾಡುತ್ತಿದ್ದೇವೆ ಮತ್ತ ಇದಕ್ಕೆ ಹೊಸಾದಾಗಿ ಬಂಡವಾಳ ಹಾಕಿ ಸರಿಪಡಿಸುತ್ತೇವೆ. ನೀವು ಆಗುಂಬೆಯೂ ಹೇಳಿದಿರಲ್ಲ ಅದರ ಕೆಲಸ ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಬೆಳಾಗಾಂ ಜಿಲ್ಲೆಯಲ್ಲಿ ಎಷ್ಟೋ ಪ್ರವಾಸಿ ಕೇಂದ್ರಗಳು ಇವೆ. ಆದರೆ ಆ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲಿಕ್ಕೆ ಬೆಳಗಾಂನಿಂದ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ರೀತಿಯ ಬಸ್ ಅನುಕೂಲತೆ ಇಲ್ಲ. ಆದಕಾರಣ ಅಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಇದರಿಂದ ಪ್ರೈವೇಟ್ ಬಸ್ಸುಗಳು ಕಡಿಮೆಯಾಗುತ್ತವೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅವರ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗಾಗಲೇ ಪ್ರವಾಸೋದ್ಯಮ ಇಲಾಖೆಯವರಿಗೆ ಒಂದು ಪ್ರೈವೇಟರವರೂ ಒಂದು 1 ಕೋಟಿ 25 ಲಕ್ಷ ರೂಪಾಯಿ ಖರ್ಚು ಮಾಡಿ ರಿಸಾರ್ಟ ಓಪನ್ ಮಾಡುವುದಕ್ಕೆ ಪರ್ಮಿಶನ್ ಕೇಳಿದ್ದಾರೆ. ನಾವು ಅದನ್ನು ಕೊಟ್ಟಿದ್ದೇವೆ. ಹಾಗೆ ಮಾನ್ಯ ಸದಸ್ಯರು ಹೇಳಿದ ಹಾಗೆ ಬೆಳಗಾಂನಿಂದ ಗೋಕಾಕಕ್ಕೂ ಅಥವಾ ಪ್ರವಾಸಿ ಸೆಂಟರ್ಸ ಏನು ಇವೆ ಅವುಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೆಯೇ ಬೆಂಗಳೂರಿನಿಂದ ಬೆಳಗಾಂಗೆ, ಬೆಳಗಾಂನಿಂದ ಸುತ್ತಮುತ್ತ ಅಥವಾ ಬೆಂಗಳೂರಿನಿಂದ ಎಲ್ಲಾ ಜಿಲ್ಲಾ ಹೆಡ್ ಕ್ವಾರ್ಟರ್ಸಗೆ ಹೋಗುವುದಕ್ಕೆ ಒಂದು ಎರ್ ಟ್ಯಾಕ್ಸಿ ಸರ್ವೀಸ್ ಪ್ರಾರಂಭ ಮಾಡಬೇಕೆಂದು ಸಲಹೆ ಬಂದಿದೆ. ಅದಕ್ಕೆ ಬೇರೆ ಪ್ರೈವೇಟ್ ಕಂಪನಿಯವರನ್ನು ಕರೆದಿದ್ದೇವೆ. ಆ ಕೆಲಸ ತೆಗದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಅರಣ್ಯ ಪ್ರದೇಶದಲ್ಲಿ ಬೇಕಾದಷ್ಟು ಜನ ಪ್ರತಿನಿತ್ಯ ಬರುತ್ತಿದ್ದಾರೆ, ಹೋಗುತ್ತಿದ್ದಾರೆ. ಆದರೆ ಅಲ್ಲಿ ಕುಡುಯುವ ನೀರಿನ ವ್ಯವಸ್ಥೆಯಾಗಲೀ, ಒಂದು ಕಾಫಿಯ ವ್ಯವಸ್ಥೆಯಾಗಲೀ, ವಿಶ್ವವಿಖ್ಯಾತ ಸ್ಥಳವಾದಂಥ ನಾಗರಹೊಳೆ ಪ್ರದೇಶಕ್ಕೆ ಬಂದವರಿಗೆ ಸಿಗುತ್ತಲ್ಲ.ಸರ್ಕಾರ ಇದರಬಗ್ಗೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ, ಇಂತಹ ಪ್ರಮುಖವಾಂಥ ಅರಣ್ಯ ಪ್ರದೇಶವನ್ನು ಏತಕ್ಕೆ ನಿರ್ಲಕ್ಷಿಸುತ್ತಿದ್ದೀರಿ? ಅಲ್ಲಿ ಒಮ್ಮೆ ಪ್ರವಾಸಿಗರು ಹೋಗಿ ಬಂದಮೇಲೆ ಏನು ಪ್ರಚಾರ ಮಾಡುತ್ತಿದ್ದಾರೆಂದರೆ ದಯವಿಟ್ಟು ನೀವು ಅಲ್ಲಿಗೆ ಹೋಗಬೇಡಿ, ಅಲ್ಲಿ ಏನೂ 'ಸಿಗುವುದಿಲ್ಲ' ಅಂತಹ ಒಂದು ಅರಣ್ಯ ಪ್ರದೇಶವನ್ನು ನಾವು ನೋಡೇ ಇಲ್ಲ. ಅಲ್ಲಿ ಅರಣ್ಯ ಪ್ರದೇಶದಲ್ಲಿರುವಂಥ ಪ್ರಾಣಿಗಳನ್ನು ನೋಡಬಹುದೇ

ವಿನಹ ಅದು ಕೂಡ ಬೆಳಿಗ್ಗೆ ಮತ್ತು ಸಾಯಂಕಾಲ ಮಾತ್ರ ಅವಕಾಶ ಇದೆ. ಆದಕಾರಣ ದಯವಿಟ್ಟು ನೀವು ಅಲ್ಲಿಗೆ ಹೋಗಬೇಡಿ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಆದಕಾರಣ ನಾನು ಈ ಸಂದರ್ಭದಲ್ಲಿ ಪ್ರವಾಸಿಗರಿಗೆ ಅಲ್ಲಿ ಅನುಕೂಲವನ್ನು ದಯವಿಟ್ಟು ಮಾಡಬೇಕೆಂದು ಸರ್ಕಾರವನ್ನು ಮತ್ತೊಮ್ಮೆ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅಲ್ಲಿ ಪ್ರವಾಸಿಗರಿಗೆ ಅನುಕೂಲವಾಗಲು ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಅದಕ್ಕೆ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ಎಂದು ಬೇರೆ ಕಂಪನಿ ಮಾಡಿದ್ದೇವೆ. ಅದು ಪ್ರವಾಸೋದ್ಯಮಕ್ಕೆ ಹೊರತಾಗಿದೆ. ಈಗ ಅದನ್ನೆಲ್ಲಾ ಸೇರಿಸುತ್ತಿದ್ದೇವೆ. ಈಗ ಕೆಲವು ಪ್ರೈವೇಟ್ ಇನ್ ವೆಸ್ಟಮೆಂಟ್‌ನವರೂ ಬಂದಿದ್ದಾರೆ. ನಾಗರಹೊಳೆ ಮತ್ತು ಬಂಡಿಪುರ ಈ ಪ್ರದೇಶದಲ್ಲಿ ಹೋಗಬೇಡಿ ಹೋಗಬೇಡಿ ಎಂದು ಯಾರು ಹೇಳುತ್ತಾರೋ ಅವರಿಗೆ ನಾವು ಪಾಠ ಕಲಿಸಬೇಕಾಗುತ್ತದೆ. ಆ ಸ್ಥಳ ಹೋಗುವ ಹಾಗಿದೆ ಎಂದು ನಾವು ತೋರಿಸಿದರೆ ಹೋಗಬೇಡಿ ಎಂದು ಯಾರಾದರೂ ಹೇಳಿದರೆ ಯಾರೂ ಕೇಳುವುದಿಲ್ಲ ಹಾಗೂ ಈ ಪ್ರಚಾರ ಆಗುವುದಿಲ್ಲ.

ಕೋಲಾರ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವುದು.

130 - ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಚಿನ್ನ (ಶತಶೃಂಗ ಪರ್ವತ) ಒಂದು ಪ್ರೇಕ್ಷಣೀಯ ಸ್ಥಳ ಎಂಬುದು ನಿಜವೇ?*

ಆ) *ಹಾಗಿದ್ದಲ್ಲಿ ಇದನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಹಾಕಿಕೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈ ಸ್ಥಳವನ್ನು ಅಭಿವೃದ್ಧ ಪಡಿಸುವ ಬಗ್ಗೆ ಯಾವ ಪ್ರಸ್ತಾಪ ಇರುವುದಿಲ್ಲ. ರಾಜ್ಯ ಪ್ರವಾಸೋದ್ಯಮ ಕಾರ್ಯ ನೀತಿಯಲ್ಲಿ ಈ ಸ್ಥಳವನ್ನು ಗುಂಪಿನಲ್ಲಿ ಸೇರಿಸಲಾಗಿದೆ.

ಅಧ್ಯಕ್ಷರು : ಶ್ರೀನಿವಾಸ ಗೌಡರ ಹೆಸರಿನಲ್ಲಿರುವ ಪ್ರಶ್ನೆಯನ್ನು ನಾನೇ ಕೇಳುತ್ತೇನೆ. ಏಕೆಂದರೆ. ಅವರು ಬೆಳಿಗ್ಗೆ ನನಗೆ ದೂರವಾಣಿ ಮುಖಾಂತರ ನಾನು ಬರುವುದು ಸ್ವಲ್ಪ ತಡವಾಗುತ್ತದೆ ಎಂದಿದ್ದರು. ದಯವಿಟ್ಟು ಇದಕ್ಕೆ ಉತ್ತರಿಸಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕೋಲಾರ ಬೆಟ್ಟ (ಶತಶೃಂಗ ಪರ್ವತ) ಒಂದು ಪ್ರೇಕ್ಷಣೀಯ ಸ್ಥಳವೇ ಎಂದು ಕೇಳಿದ್ದಾರೆ, ಹೌದು, ಆ ಸ್ಥಳವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಇಲ್ಲಿಯವರೆಗೆ ಯಾವುದೇ ಪ್ರಸ್ತಾಪವಿಲ್ಲ, ನಾನು ಇಲ್ಲದೇ ಇದದ್ದನ್ನು ಇದೆ ಎಂದು ಹೇಳುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಕೆಲವು ಅತ್ಯಂತ ಅಪೂರ್ವವಾದ ಪ್ರೇಕ್ಷಣೀಯ ಸ್ಥಳಗಳು ಇವೆ. ಅಲ್ಲಿಗೆ